ಸೃಜನಿ

**SRUJANI: Indian Journal of Innovative Research and Development (SIJIRD)**
Volume-3 Issue 6, January - February 2025, Pp. 196-210
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ವಿಧಾನಸಭಾ ಚುನಾವಣೆಗಳಲ್ಲಿ ಎನ್.ಧರ್ಮಸಿಂಗ್‌ರವರ ಚುನಾವಣಾ ಕಾರ್ಯಕ್ಷಮತೆಯ ವಿಶ್ಲೇಷಣೆ

**ವಿರೂಪಾಕ್ಷ[1] ಮತ್ತು ಡಾ.ಎಸ್.ಎನ್.ಹುಲ್ಲನ್ನವರ[2]**
[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
[2]ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ.

***Abstract:***
*ಪ್ರಸ್ತುತ ಸಂಶೋಧನಾ ಲೇಖನವು ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ ಎನ್.ಧರ್ಮಸಿಂಗ್‌ರವರ ಚುನಾವಣಾ ಕಾರ್ಯಕ್ಷಮತೆಯನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ. 1972 ರಿಂದ 2008ರ ವರೆಗೆ ಧರ್ಮಸಿಂಗ್‌ರವರು ಸ್ಪರ್ಧಿಸಿದ ಜೇವರ್ಗಿ ಮತಕ್ಷೇತ್ರದ ಪ್ರತಿ ವಿಧಾನಸಭಾ ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಲಾಗಿದೆ. ಈ ಚುನಾವಣಾ ದತ್ತಾಂಶಗಳನ್ನು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿ, ದತ್ತಾಂಶ ವಿಶ್ಲೇಷಣಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ದತ್ತಾಂಶಗಳನ್ನು ಭಾರತದ ಚುನಾವಣಾ ಆಯೋಗದಿಂದ ಪ್ರಾಥಮಿಕವಾಗಿ ತೆಗೆದುಕೊಳ್ಳಲಾಗಿದೆ. ದತ್ತಾಂಶಗಳ ವಿಶ್ಲೇಷಣೆಗಾಗಿ ಶೇಕಡಾವಾರು, ಸರಾಸರಿ, ಮಧ್ಯಂಕ, ಪ್ರಮಾಣಿತ ವಿಚಲನ, ವ್ಯತ್ಯಾಸದ ಗುಣಾಂಕ, ಟಿ–ಟೆಸ್ಟ್, ಪಿ–ವ್ಯಾಲ್ಯೂ ಮತ್ತು ಪರಸ್ಪರ ಸಂಬಂಧ ಗುಣಾಂಕಗಳನ್ನು ಸಂಖ್ಯಾಶಾಸ್ತ್ರೀಯ ಆಧಾರದ ಮೇಲೆ ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಎನ್.ಧರ್ಮಸಿಂಗ್‌ರವರು ಸ್ಪರ್ಧಿಸಿದ ವಿಧಾನಸಭಾ ಚುನಾವಣಾ ಫಲಿತಾಂಶಗಳ ನೈಜ ಚಿತ್ರವನ್ನು ಅರ್ಥೈಸಿಕೊಳ್ಳಲು ಚಿತ್ರಾತ್ಮಕ ವಿಶ್ಲೇಷಣೆಯಂತಹ ಸರಳ ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಬಳಸಿಕೊಳ್ಳಲಾಗಿದೆ.*

***Keywords:*** *ಚುನಾವಣಾ ಕಾರ್ಯಕ್ಷಮತೆ, ಪ್ರಮಾಣಿತ ವಿಚಲನ, ಧರ್ಮನಿರಪೇಕ್ಷ ನಾಯಕ.*

## ಪೀಠಿಕೆ

ಮರಣದ ಭಾರತವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಬಹುದೊಡ್ಡ ರಾಷ್ಟ್ರವಾಗಿದೆ. ಇಂತಹ ರಾಷ್ಟ್ರದಲ್ಲಿನ ರಾಜ್ಯಾಡಳಿತವನ್ನು ಸರಿಯಾದ ನಿಟ್ಟಿನಲ್ಲಿ ಮುನ್ನಡೆಸಲು ನಾಯಕರ ಪಾತ್ರ ಅವಶ್ಯಕ. ನಾಯಕರಿಲ್ಲದ ರಾಷ್ಟ್ರವು ನಾವಿಕನಿಲ್ಲದ ಹಡಗಿನಂತೆ. ಒಂದು ರಾಷ್ಟ್ರದ ಪ್ರಗತಿ ಮತ್ತು ವಿಗತಿಗೆ ಅಲ್ಲಿರುವ ನಾಯಕರೇ ಪ್ರಮುಖ ಕಾರಣೀಭೂತರು. ಅದಕ್ಕಾಗಿ ಒಂದು ರಾಷ್ಟ್ರವನ್ನು ಸಮರ್ಥವಾಗಿ ಸಂಘಟಿಸಿ, ಅಭಿವೃದ್ಧಿಯತ್ತ ಕೊಂಡೊಯ್ಯಲು ನಾಯಕರು ಅತಿ ಅವಶ್ಯಕವಾಗಿ ಬೇಕು. ಸ್ವತಂತ್ರ ಭಾರತದ ನಂತರ ಸಮಯ, ಸಂದರ್ಭಕ್ಕನುಸಾರವಾಗಿ ಹಲವಾರು ವ್ಯಕ್ತಿಗಳು ನಾಯಕರಾಗಿ ಹೊರಹೊಮ್ಮಿದ್ದಾರೆ. ಆದರೆ ರಾಜಕೀಯ ರಂಗದಲ್ಲಿದ್ದವರೆಲ್ಲರೂ ಜನನಾಯಕರಾಗಿಲ್ಲ. ಕೆಲವೇ ಕೆಲವು ರಾಜಕೀಯ ನಾಯಕರು ಜನತೆಗೆ ಸಲ್ಲಿಸಿದ ಅಮೂಲ್ಯ ಸೇವೆಯಿಂದಾಗಿ ಜನಮನದಲ್ಲಿ ಶಾಶ್ವತವಾಗಿ ಉಳಿದಿದ್ದಾರೆ. ಅಂತಹವರಲ್ಲಿ ಕರ್ನಾಟಕದ ಮಹತ್ವದ

***Please cite this article as:*** ವಿರೂಪಾಕ್ಷ ಮ್ತು ಎಸ್.ಎನ್.ಹುಲ್ಲನ್ನವರ. (2025). ವಿಧಾನಸಭಾ ಚುನಾವಣೆಗಳಲ್ಲಿ ಎನ್.ಧರ್ಮಸಿಂಗ್‌ರವರ ಚುನಾವಣಾ ಕಾರ್ಯಕ್ಷಮತೆಯ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(6), 196–210

ನಾಯಕರಲ್ಲಿ ಎನ್.ಧರ್ಮಸಿಂಗ್‌ರವರು ಒಬ್ಬರಾಗಿದ್ದಾರೆ.

ಭಾರತದ ರಾಜಕೀಯವೆಂದರೆ ಅದು ಜಾತಿರಾಜಕಾರಣ. ಜಾತಿ ಆಧಾರಿತವಾದ ರಾಜಕಾರಣದಲ್ಲಿ ಬೆರಳಣಿಕೆಯಷ್ಟು ಹೊಂದಿರುವ ರಜಪೂತ ಸಮುದಾಯದವರಾದ ಎನ್.ಧರ್ಮಸಿಂಗ್‌ರವರು ಎಂಟು ಬಾರಿ ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾಗಿರುವುದು ಜಾತಿ ರಾಜಕಾರಣದ ಲೆಕ್ಕಾಚಾರಗಳು ತಲೆಕೆಳಗಾಗುವಂತೆ ಮಾಡಿ ಜನಜನಿತರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಜಾತಿ ಪ್ರಧಾನವಾದ ವ್ಯವಸ್ಥೆಯಲ್ಲಿ ಧರ್ಮನಿರಪೇಕ್ಷ ನಾಯಕರಾದ ಎನ್.ಧರ್ಮಸಿಂಗ್‌ರವರ ಒಂಬತ್ತು ವಿಧಾನಸಭಾ ಚುನಾವಣಾ ಫಲಿತಾಂಶಗಳ ಕಾರ್ಯಕ್ಷಮತೆಯನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ.

**ಉದ್ದೇಶಗಳು**

1. ವಿಧಾನಸಭಾ ಚುನಾವಣೆಗಳಲ್ಲಿ ಎನ್.ಧರ್ಮಸಿಂಗ್‌ರವರ ಚುನಾವಣಾ ಕಾರ್ಯಕ್ಷಮತೆಯನ್ನು ಪರಿಶೀಲಿಸುವುದು.
2. ಎನ್.ಧರ್ಮಸಿಂಗ್‌ರವರು ಸ್ಪರ್ಧಿಸಿದ ವಿಧಾನಸಭಾ ಚುನಾವಣಾ ಫಲಿತಾಂಶಗಳನ್ನು ಮತದಾನದ ಮ್ಯಾಟ್ರಿಕ್ಸ್‌ಗಳ ಮೂಲಕ ಅರ್ಥೈಸಿಕೊಳ್ಳುವುದು.

**ಸಂಶೋಧನಾ ವಿಧಾನ:**

ಪ್ರಸ್ತುತ ಸಂಶೋಶನಾ ಲೇಖನವು ಕರ್ನಾಟಕ ವಿಧಾನಸಭಾ ಚುನಾವಣೆಗಳಲ್ಲಿ ಎನ್.ಧರ್ಮಸಿಂಗ್‌ರವರ ಚುನಾವಣಾ ಕಾರ್ಯಕ್ಷಮತೆಯನ್ನು ಪರಿಶೀಲಿಸುವ ಉದ್ದೇಶವನ್ನು ಹೊಂದಿದೆ. 1972 ರಿಂದ 2008ರ ವರೆಗೆ ಧರ್ಮಸಿಂಗ್‌ರವರು ಸ್ಪರ್ಧಿಸಿದ ಜೇವರ್ಗಿ ಮತಕ್ಷೇತ್ರದ ಪ್ರತಿ ವಿಧಾನಸಭಾ ಚುನಾವಣಾ ಫಲಿತಾಂಶಗಳನ್ನು ವಿಶ್ಲೇಷಿಸಲಾಗಿದೆ. ಈ ಚುನಾವಣಾ ದತ್ತಾಂಶಗಳನ್ನು ಆನುಷಂಗಿಕ ಮೂಲಗಳಿಂದ ಸಂಗ್ರಹಿಸಿ, ದತ್ತಾಂಶ ವಿಶ್ಲೇಷಣಾ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ. ಈ ದತ್ತಾಂಶಗಳನ್ನು ಭಾರತದ ಚುನಾವಣಾ ಆಯೋಗದಿಂದ ಪ್ರಾಥಮಿಕವಾಗಿ ತೆಗೆದುಕೊಳ್ಳಲಾಗಿದೆ. ದತ್ತಾಂಶಗಳ ವಿಶ್ಲೇಷಣೆಗಾಗಿ ಶೇಕಡಾವಾರು, ಸರಾಸರಿ, ಮಧ್ಯಂಕ, ಪ್ರಮಾಣಿತ ವಿಚಲನ, ವ್ಯತ್ಯಾಸದ ಗುಣಾಂಕ, ಟಿ–ಟೆಸ್ಟ್, ಪಿ–ವ್ಯಾಲ್ಯೂ ಮತ್ತು ಪರಸ್ಪರ ಸಂಬಂಧ ಗುಣಾಂಕಗಳನ್ನು ಸಂಖ್ಯಾಶಾಸ್ತ್ರೀಯ ಆಧಾರದ ಮೇಲೆ ತೌಲನಿಕ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಎನ್.ಧರ್ಮಸಿಂಗ್‌ರವರು ಸ್ಪರ್ಧಿಸಿದ ವಿಧಾನಸಭಾ ಚುನಾವಣಾ ಫಲಿತಾಂಶಗಳ ನೈಜ ಚಿತ್ರವನ್ನು ಅರ್ಥೈಸಿಕೊಳ್ಳಲು ಚಿತ್ರಾತ್ಮಕ ವಿಶ್ಲೇಷಣೆಯಂತಹ ಸರಳ ಅಂಕಿ–ಅಂಶಗಳ ವಿಶ್ಲೇಷಣೆಯನ್ನು ಬಳಸಿಕೊಳ್ಳಲಾಗಿದೆ.

**ಎನ್.ಧರ್ಮಸಿಂಗ್‌ರವರ ವಿಧಾನಸಭಾ ಚುನಾವಣಾ ಫಲಿತಾಂಶದ ಅಂಕಿ–ಅಂಶಗಳ ವಿಶ್ಲೇಷಣೆ**

ಎನ್.ಧರ್ಮಸಿಂಗ್‌ರವರು ಎಮ್.ಎ., ಎಲ್‌ಎಲ್.ಬಿ. ಪದವಿ ಪಡೆದು, ಕೆಲಕಾಲ ಹಿಂದಿ ಶಿಕ್ಷಕರಾಗಿ, ವಕೀಲರಾಗಿ ಸೇವೆ ಸಲ್ಲಿಸುತ್ತಿರುವಾಗ 1968ರಲ್ಲಿ ಕಲಬುರಗಿಯ ನಗರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ, ವಿಜಯ ಸಾಧಿಸಿದ್ದೆ ಅವರ ರಾಜಕೀಯ ಬದುಕಿನ ಮೊದಲ ಮೆಟ್ಟಿಲಾಯಿತು. ನಂತರದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ಸೇರಿ, 1972 ರಿಂದ 2008 ವಿಧಾನಸಭಾ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಾ ಬಂದಿರುತ್ತಾರೆ. ಆ ಒಂಬತ್ತು ವಿಧಾನಸಭಾ ಚುನಾವಣಾ ಅಂಕಿ–ಅಂಶಗಳ ಅವಲೋಕನ ಈ ಕೆಳಗಿನಂತೆ ವಿಶ್ಲೇಷಿಸಲಾಗಿದೆ.


**ಪ್ರಥಮ ಬಾರಿಗೆ ವಿಧಾನಸಭಾ ಚುನಾವಣಾ ಸ್ಪರ್ಧೆ– 1972**

**ಕೋಷ್ಟಕ–1: 1972ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡ |
|---|---|---|---|---|
| 1 | ಎನ್.ಧರ್ಮಸಿಂಗ್ | INC | 20500 | 57.99% |
| 2 | ಮಹಾದೇವಪ್ಪ ಯಶವಂತರಾವ್ | NCO | 13896 | 39.31% |
| 3 | ಆರ್.ಆರ್.ಕುಲಕರ್ಣಿ ಬಾಬಾರಾವ್ | BJS | 953 | 2.70% |

ಆಕರ: **http://eci.gov.in**

**ರೇಖಾಚಿತ್ರ–1: 1972ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**




1972 ರಲ್ಲಿ ನಡೆದ ಐದನೇ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ ಕಾಂಗ್ರೆಸ್ 165 ಸ್ಥಾನಗಳನ್ನು ಗೆದ್ದುಕೊಂಡು ಮೇಲುಗೈ ಸಾಧಿಸಿದರೆ, ಓಲ್ಡ್ ಕಾಂಗ್ರೆಸ್ ಕೇವಲ 24 ಸ್ಥಾನಗಳನ್ನು ಗೆದ್ದುಕೊಂಡು ತೃಪ್ತಿಗೊಂಡಿತು. ಈ ಅವಧಿಯಲ್ಲಿ ಡಿ.ದೇವರಾಜ್ ಅರಸ್‌ರವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಚುನಾವಣೆ 1969ರಲ್ಲಿ ಕಾಂಗ್ರೆಸ್ ಪಕ್ಷದ ವಿಭಜನೆಯ ನಂತರ ನಡೆದ ಮೊದಲ ಚುನಾವಣೆಯಾಗಿತ್ತು. ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ ಎನ್.ಧರ್ಮಸಿಂಗ್‌ರವರು ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ 20,500 (59.99%) ಮತಗಳನ್ನು ಪಡೆದರೆ, ಕಾಂಗ್ರೆಸ್(N) ಪಕ್ಷದ ಪ್ರಬಲ ಪ್ರತಿಸ್ಪರ್ಧಿಯಾದ ಮಹಾದೇವಪ್ಪ ಯಶವಂತರಾವ್ ರಾಂಪೂರೆರವರು 13,896 (39.31%) ಮತಗಳನ್ನು ಪಡೆದರು. 6,604 (18.68%) ಮತಗಳ ಅಂತರದಿಂದ ಧರ್ಮಸಿಂಗ್‌ರವರು ಚುನಾಯಿತರಾಗಿ ಪ್ರಥಮ ಬಾರಿಗೆ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾದರು. ರಾಜಕೀಯ ಅಸ್ಥಿರತೆ ಮತ್ತು ಆಂತರಿಕ ಸಂಘರ್ಷದ ಕಾರಣದಿಂದಾಗಿ ಡಿ.ದೇವರಾಜ್ ಅರಸ್‌ರವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ಡಿಸೆಂಬರ್ 31, 1977ರಂದು ಪತನಗೊಂಡು, ರಾಷ್ಟ್ರಪತಿ ಆಳ್ವಿಕೆ ಜಾರಿಗೊಂಡಿತು.


**ದ್ವಿತೀಯ ಬಾರಿಗೆ ವಿಧಾನಸಭಾ ಚುನಾವಣಾ ಸ್ಪರ್ಧೆ–1978**

**ಕೋಷ್ಟಕ–2: 1978ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC(I) | 26584 | 54.13% |
| 2 | ಮಲ್ಲಪ್ಪ ಮಲ್ಕಪ್ಪ ಸಾಹು ಆಲೂರ | JNP | 14989 | 30.52% |
| 3 | ಅಣ್ಣಾರ್ಯಗೌಡ ಶಿವಶರಣಪ್ಪಗೌಡ ಪಾಟೀಲ | INC | 6266 | 12.76% |
| 4 | ಶಿವಶರಣಪ್ಪ ಮಹಾಂತಪ್ಪಗೌಡ ಜಂಬೇರಾಳ | IND | 1273 | 2.59% |

ಆಕರ: **http://eci.gov.in**

**ರೇಖಾಚಿತ್ರ–2: 1978ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**




1978ರ ಆರನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ ಕಾಂಗ್ರೆಸ್(ಐ) 149 ಸ್ಥಾನಗಳನ್ನು ಗೆದ್ದುಕೊಂಡು, ಮತ್ತೆ ಡಿ.ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾದರು. ನಂತರದಲ್ಲಿ ಆರ್. ಗುಂಡೂರಾವ್‌ರವರು ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿ, ಅತಿ ಚಿಕ್ಕ ವಯಸ್ಸಿನ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಪ್ರತಿಪಕ್ಷವಾದ ಜನತಾ ಪಕ್ಷವೂ 59 ಸ್ಥಾನಗಳನ್ನು ಜಯಿಸುವ ಮೂಲಕ ಎರಡನೇ ಸ್ಥಾನವನ್ನು ಪಡೆಯಿತು. ಎನ್.ಧರ್ಮಸಿಂಗ್‌ರವರು ಜೇವರ್ಗಿ ಕ್ಷೇತ್ರದಿಂದ ಕಾಂಗ್ರೆಸ್(ಐ) ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಒಟ್ಟು 26,584 (54.31%) ಮತಗಳನ್ನು ಪಡೆದರೆ, ಜನತಾ ಪಕ್ಷದ ಮಲ್ಲಪ್ಪ ಮಲ್ಕಪ್ಪ ಸಾಹು ಆಲೂರ್‌ರವರು 14,989 (30.52%) ಮತಗಳನ್ನು ಪಡೆದರು. 11,595 (23.66%) ಮತಗಳ ಅಂತರದಿಂದ ಧರ್ಮಸಿಂಗ್‌ರವರು ಜಯಿಸಿದರು. ಈ ಅವಧಿಯಲ್ಲಿ ಆರ್.ಗುಂಡೂರಾವ್‌ರವರ ಸಚಿವ

ಸಂಪುಟದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು (1980–83).


**ತೃತೀಯ ಬಾರಿಗೆ ವಿಧಾನಸಭಾ ಚುನಾವಣಾ ಸ್ಪರ್ಧೆ–1983**

**ಕೋಷ್ಟಕ–3: 1983ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC | 26643 | 54.34% |
| 2 | ಹನುಮಂತರಾಯ ರೇವಣಸಿದ್ದಪ್ಪ | JNP | 16781 | 34.23% |
| 3 | ಶಿವಶರಣಪ್ಪ ಮಹಾಂತಪ್ಪಗೌಡ ಜಂಬೇರಾಳ | IND | 3339 | 6.81% |
| 4 | ಅಬ್ದುಲ್ ವಾಹೇದ್ ಜಹಾಂಗೀರದಾರ | BJP | 2265 | 4.62% |

ಆಕರ: **http://eci.gov.in**

**ರೇಖಾಚಿತ್ರ–3: 1983ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ**




1983ರ ಏಳನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ 95 ಸ್ಥಾನಗಳನ್ನು ಜನತಾ ಪಕ್ಷ, 82 ಸ್ಥಾನಗಳನ್ನು ಕಾಂಗ್ರೆಸ್ ಪಕ್ಷ ಮತ್ತು 18 ಸ್ಥಾನಗಳನ್ನು ಬಿಜೆಪಿ ಪಕ್ಷಗಳು ಪಡೆದು ಅತಂತ್ರ ವಿಧಾನಸಭೆಗೆ ಕಾರಣವಾಯಿತು. ಪಕ್ಷೇತರರು ಮತ್ತು ಬಿಜೆಪಿಯ ಬಾಹ್ಯ ಬೆಂಬಲದೊಂದಿಗೆ ರಾಮಕೃಷ್ಣ ಹೆಗಡೆರವರ ನೇತೃತ್ವದಲ್ಲಿ ಜನತಾ ಪಕ್ಷವು ಕರ್ನಾಟಕದಲ್ಲಿ ಮೊದಲ ಬಾರಿಗೆ ಕಾಂಗ್ರೆಸ್ಸೇತರ ಸಮ್ಮಿಶ್ರ ಸರ್ಕಾರವನ್ನು ರಚಿಸಿತು. ಎನ್.ಧರ್ಮಸಿಂಗ್‌ರವರು 26,643 (54.34%) ಮತಗಳನ್ನು ಪಡೆದರೆ, ಜನತಾ ಪಕ್ಷದ ಹನುಮಂತರಾಯ ರೇವಣಸಿದ್ಧಪ್ಪರವರು 16,781 (34.23%) ಮತಗಳನ್ನು ಪಡೆದಿದ್ದರು. 9,862 (20.12%) ಮತಗಳ ಅಂತರದಿಂದ ಸತತ ಮೂರನೇ ಬಾರಿ ಧರ್ಮಸಿಂಗ್‌ರವರು ಜಯಗಳಿಸಿದರು.


**ನಾಲ್ಕನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ–1985**

**ಕೋಷ್ಟಕ–4: 1985ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC | 27548 | 48.15% |
| 2 | ಚನ್ನಬಸಪ್ಪ ಕುಳಗೇರಿ | JNP | 22957 | 40.12% |
| 3 | ಖಾಜಾಪಟೇಲ ಅಫಖಾನಪಟೇಲ | IND | 2179 | 3.81% |
| 4 | ಮಹಾದೇವಪ್ಪ ಟಿ. ಪಾಟೀಲ | IND | 1671 | 2.92% |
| 5 | ಧರ್ಮವೀರ ರಘುವಂಶಿ | BJP | 1156 | 2.02% |
| 6 | ಮಹೆಬೂಬ್ಬಿ ಅಲಿ | IND | 774 | 1.35% |
| 7 | ವಾಯ್.ಎಸ್.ನೆಲೋಗಿ | IND | 445 | 0.78% |
| 8 | ಶಿವಶರಣಪ್ಪ ಮಹಾಂತಪ್ಪಗೌಡ ಜಂಬೇರಾಳ | IND | 246 | 0.43% |
| 9 | ಮಹಮ್ಮದ ಗುಂಡಗುರ್ತಿ | IND | 241 | 0.42% |

ಆಕರ: **http://eci.gov.in**

**ರೇಖಾಚಿತ್ರ–4: 1985ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮ**




**ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ**

1985ರ 8ನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ 139 ಸ್ಥಾನಗಳನ್ನು ಜನತಾ ಪಕ್ಷವು ಪಡೆದು, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಕಾಂಗ್ರೆಸ್ ಪಕ್ಷವು ಕೇವಲ 65 ಸ್ಥಾನಗಳನ್ನು ಪಡೆದು ಪ್ರತಿಪಕ್ಷವಾಯಿತು. ಮತ್ತೊಮ್ಮೆ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾದರು. ನಂತರದಲ್ಲಿ ಎಸ್.ಆರ್.ಬೊಮ್ಮಾಯಿರವರು ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ ಎನ್.ಧರ್ಮಸಿಂಗ್‌ರವರು ಎಂಟು ಜನ ಪ್ರತಿಸ್ಪರ್ಧಿಗಳನ್ನು ಹಿಂದಿಕ್ಕಿ, 27,548 (49.15%) ಮತಗಳನ್ನು ಪಡೆದರೆ, ಜನತಾ ಪಕ್ಷದ ಚನ್ನಬಸಪ್ಪ ಕುಳಗೇರಿರವರು 22,957 (40.12%) ಮತಗಳನ್ನು ಪಡೆದರು. 4,591 (8.02%) ಮತಗಳ ಅಂತರದಿಂದ ಧರ್ಮಸಿಂಗ್‌ರವರು 4ನೇ ಬಾರಿ ವಿಧಾನಸಭಾ ಸದಸ್ಯರಾಗಿ ಚುನಾಯಿತರಾದರು.


**ಐದನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ–1989**

**ಕೋಷ್ಟಕ–5: 1989ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC | 30751 | 47.13% |
| 2 | ಅಪ್ಪಾಸಾಹೇಬ ಬಸವಂತರಾವ ಪಾಟೀಲ | JNP(JP) | 19087 | 29.25% |
| 3 | ಚನ್ನಬಸಪ್ಪ ದಂಡಪ್ಪ ಕುಳಗೇರಿ | JD | 10705 | 16.41% |
| 4 | ಪ್ರಧಾನಿ ಶಂಕ್ರಪ್ಪ | KRS | 1494 | 2.29% |
| 5 | ಶಿವಲಿಂಗಪ್ಪ | BJP | 823 | 1.26% |
| 6 | ಶಿವಶರಣಪ್ಪ | IND | 793 | 1.22% |
| 7 | ರಾಮಲಿಂಗಪ್ಪ | RPI | 619 | 0.95% |
| 8 | ಮಂಜಿತ ಸಿಂಗ್ ಅವತಾರಸಿಂಗ್ | IND | 501 | 0.77% |
| 9 | ಮಹೆಬೂಬ ಅಲಿ ಖಾಜಾಸಾಬ | IND | 473 | 0.72% |

ಆಕರ: **http://eci.gov.in**

**ರೇಖಾಚಿತ್ರ–5: 1989ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ**




1989ರ 9ನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ 178 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದರೆ, ಜನತಾ ದಳ ಪಕ್ಷವು 24 ಸ್ಥಾನ, ಬಿಜೆಪಿಯು 4 ಸ್ಥಾನ ಮತ್ತು ಜನತಾ ಪಕ್ಷ(ಜೆ.ಪಿ)ವು 2 ಸ್ಥಾನಗಳನ್ನು ಪಡೆಯಿತು. ಈ ಅವಧಿಯಲ್ಲಿ ವೀರೇಂದ್ರ ಪಾಟೀಲ್, ಎಸ್.ಬಂಗಾರಪ್ಪ ಮತ್ತು ಎಂ.ವೀರಪ್ಪ ಮೊಯ್ಲಿ ಹೀಗೆ ಮೂರು ಜನ ಮುಖ್ಯಮಂತ್ರಿಗಳು ಕಾರ್ಯನಿರ್ವಹಿಸಿದ್ದಾರೆ. ಧರ್ಮಸಿಂಗ್‌ರವರು 30,751 (47.13%) ಮತಗಳನ್ನು ಪಡೆದರೆ, ಜನತಾ ಪಕ್ಷ(ಜೆಪಿ)ದ ಅಪ್ಪಾಸಾಹೇಬ್ ಬಸವಂತರಾವ್ ಪಾಟೀಲ್ ರವರು 19,087 (29.25%) ಮತಗಳನ್ನು ಪಡೆದರು. 11,664 (17.88%) ಮತಗಳ ಅಂತರದಿಂದ ಧರ್ಮಸಿಂಗ್‌ರವರು ಜಯಗಳಿಸಿದರು. ಎಸ್.ಬಂಗಾರಪ್ಪ ರವರ ಸಚಿವ ಸಂಪುಟದಲ್ಲಿ ಗೃಹ ಮತ್ತು ಅಬಕಾರಿ ಸಚಿವರಾಗಿ (1990–92) ಹಾಗೂ ಎಂ.ವೀರಪ್ಪ ಮೊಯ್ಲಿರವರ ಸಚಿವ ಸಂಪುಟದಲ್ಲಿ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರಾಗಿ (1992–94) ಧರ್ಮಸಿಂಗ್‌ರವರು ಕಾರ್ಯನಿರ್ವಹಿಸಿದರು.


**ಆರನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ–1994**

**ಕೋಷ್ಟಕ–6: 1994ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC | 30840 | 40.91% |
| 2 | ಶಿವಲಿಂಗಪ್ಪ ಪಾಟೀಲ ನರಿಬೋಳ | KCP | 26785 | 35.53% |
| 3 | ಧರ್ಮಣ್ಣ ದೊಡ್ಡಮನಿ | BJP | 7790 | 10.33% |
| 4 | ಅಬ್ದುಲ್ ಹಮೀದ್ | JD | 7307 | 9.69% |
| 5 | ಶಿವಾಜಿ ಸಾಯಬಣ್ಣಪ್ಪ | IND | 1432 | 1.90% |
| 6 | ಪಾಟೀಲ ಶಿವಲಿಂಗಪ್ಪ ಗೌಡ ಕೊಂಡಗುಳಿ | IND | 672 | 0.89% |
| 7 | ಮಡಿವಾಳಪ್ಪ ಬಿ. ಮುದ್ದ | IND | 556 | 0.74% |

**ಆಕರ: http://eci.gov.in**

**ರೇಖಾಚಿತ್ರ–6: 1994ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**




1994ರ 10ನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ 115 ಸ್ಥಾನಗಳನ್ನು ಜನತಾದಳ ಪಕ್ಷವು ಬಹುಮತ ಪಡೆದು ಸರ್ಕಾರ ರಚನೆ ಮಾಡಿಕೊಂಡಿತ್ತು. 40 ಸ್ಥಾನಗಳನ್ನು ಗೆದ್ದು ಬಿಜೆಪಿ ಎರಡನೇ ಸ್ಥಾನ ಪಡೆದರೆ, ಕಾಂಗ್ರೆಸ್ ಕೇವಲ 34 ಸ್ಥಾನಗಳನ್ನು ಪಡೆದು 3ನೇ ಸ್ಥಾನಕ್ಕೆ ಕೆಳಗಿಳಿಯಿತು. ಅವಧಿಯಲ್ಲಿ ಎಚ್.ಡಿ.ದೇವೇಗೌಡ ಮತ್ತು ಜೆ.ಎಚ್. ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದರು. ಜೇವರ್ಗಿ ಕ್ಷೇತ್ರದಿಂದ ಧರ್ಮಸಿಂಗ್‌ರವರು 30,840 (40.91%) ಮತಗಳನ್ನು ಪಡೆದರೆ, ಕರ್ನಾಟಕ ಕಾಂಗ್ರೆಸ್ ಪಾರ್ಟಿ (ಕೆಸಿಪಿ)ದಿಂದ ಶಿವಲಿಂಗಪ್ಪ ಪಾಟೀಲ ನರಿಬೋಳರವರು 26,785 (35.53%) ಮತಗಳನ್ನು ಪಡೆದರು. 4,055 (5.38%) ಮತಗಳ ಅಂತರದಿಂದ ಧರ್ಮಸಿಂಗ್‌ರವರು ಗೆದ್ದರು.


**ಏಳನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ–1999**

**ಕೋಷ್ಟಕ–7: 1999ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಎನ್.ಧರ್ಮಸಿಂಗ್ | INC | 37510 | 43.17% |
| 2 | ಶಿವಲಿಂಗಪ್ಪ ಪಾಟೀಲ ನರಿಬೋಳ | BJP | 35549 | 40.91% |
| 3 | ಕೇದಾರಲಿಂಗಯ್ಯ ಹಿರೇಮಠ | JD(S) | 7715 | 8.88% |
| 4 | ಶಿವಲಿಂಗಪ್ಪ ಕಿನ್ನೂರ ಹರವಾಳ | BSP | 4577 | 5.27% |
| 5 | ಬಾಳಪ್ಪ ದುಂಡಪ್ಪ ಈರವ್ವಗೋಳ | IND | 1541 | 1.77% |

**ಆಕರ:** **http://eci.gov.in**

**ರೇಖಾಚಿತ್ರ–7: 1999ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**




1999ರ 11ನೇ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 224 ಸ್ಥಾನಗಳಲ್ಲಿ ಕಾಂಗ್ರೆಸ್ ಪಕ್ಷವು 132 ಸ್ಥಾನಗಳನ್ನು ಪಡೆದರೆ, ಬಿಜೆಪಿ ಪಕ್ಷವು 44 ಸ್ಥಾನಗಳನ್ನು, ಜನತಾದಳ(ಯು) 18 ಸ್ಥಾನಗಳನ್ನು, ಜನತಾದಳ(ಎಸ್) 10 ಸ್ಥಾನಗಳನ್ನು ಪಡೆದುಕೊಂಡವು. ಈ ಅವಧಿಯಲ್ಲಿ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಜೇವರ್ಗಿ ಕ್ಷೇತ್ರದಿಂದ ಎನ್.ಧರ್ಮಸಿಂಗ್‌ರವರು 37,510 (43.17%) ಮತಗಳನ್ನು ಪಡೆದರೆ, ಬಿಜೆಪಿ ಪಕ್ಷದ ಶಿವಲಿಂಗಪ್ಪ ಪಾಟೀಲ್ ನರಿಬೋಳರವರು 35,549 (40.91%) ಮತಗಳನ್ನು ಪಡೆದರು. 1,961 (2.26%) ಮತಗಳ ಅಂತರದಿಂದ ಧರ್ಮಸಿಂಗ್‌ರವರು ಜಯಿಸಿದರು. ಎಸ್.ಎಂ.ಕೃಷ್ಣರವರ ಸಚಿವ ಸಂಪುಟದಲ್ಲಿ ಧರ್ಮಸಿಂಗ್‌ರವರು ಲೋಕೋಪಯೋಗಿ ಸಚಿವರಾಗಿ (1999–2004) ಆಯ್ಕೆಯಾದರು.


**ಎಂಟನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ – 2004**

**ಕೋಷ್ಟಕ–8: 2004ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳು | ಪಕ್ಷಗಳು | ಪಡೆದ ಮತಗಳು | ಶೇಕಡವಾರು |
|---|---|---|---|---|
| 1 | ಮಹಮ್ಮದ ಅಲಿ ಹನ್ನೂರಜ್ | MUL | 385 | 0.37% |
| 2 | ಎನ್.ಧರ್ಮಸಿಂಗ್ | INC | 45235 | 43.52% |
| 3 | ಧರ್ಮಣ್ಣ ಇಟಗಾ | IND | 1703 | 1.64% |
| 4 | ಕಲ್ಲಾಲಿಂಗಪ್ಪ ಈಶ್ವರಪ್ಪ ಹೂಗಾರ | IND | 487 | 0.47% |
| 5 | ಶಾಂತಾ ಅರುಣಕುಮಾರ ಪಾಟೀಲ | KNDP | 665 | 0.64% |
| 6 | ಶಿವಲಿಂಗಪ್ಪ ಪಾಟೀಲ ನರಿಬೋಳ | BJP | 42504 | 40.90% |
| 7 | ಮುಕುಡಪ್ಪ ಕೆ. | JD(S) | 10382 | 9.99% |
| 8 | ಖಾಜಾ ಪಟೇಲ | SP | 731 | 0.70% |
| 9 | ಶಿವಲಿಂಗಪ್ಪ ಕಿನ್ನೂರ ಹರವಾಳ | BSP | 1837 | 1.77% |

ಆಕರ: **http://eci.gov.in**

**ರೇಖಾಚಿತ್ರ–8: 2004ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**




2004ರ 12ನೇ ವಿಧಾನಸಭೆಗೆ ನಡೆದ ಚುನಾವಣೆ ಅತಂತ್ರ ವಿಧಾನಸಭೆಗೆ ಕಾರಣವಾಯಿತು. ಮೊದಲ ಬಾರಿಗೆ ಬಿಜೆಪಿ ಪಕ್ಷವು 79 ಸ್ಥಾನಗಳನ್ನು ಗೆದ್ದುಕೊಂಡರೆ, ಕಾಂಗ್ರೆಸ್ ಪಕ್ಷವು 65 ಸ್ಥಾನಗಳನ್ನು, ಜನತಾದಳ(ಎಸ್) ಪಕ್ಷವು 58 ಸ್ಥಾನಗಳನ್ನು, ಜನತಾದಳ(ಯು) 5 ಸ್ಥಾನಗಳನ್ನು ಹಾಗೂ ಪಕ್ಷೇತರರು 17 ಸ್ಥಾನಗಳನ್ನು ಗೆದ್ದುಕೊಂಡು ಅತಂತ್ರ ಸ್ಥಿತಿಗೆ ಕಾರಣವಾಯಿತು. ಈ ಅವಧಿಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ನೇತೃತ್ವದ ಸಮ್ಮಿಶ್ರ ಸರ್ಕಾರಕ್ಕೆ ಎನ್.ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದ ಧರ್ಮಸಿಂಗ್‌ರವರು 45,235 (43.52%) ಮತಗಳನ್ನು ಪಡೆದರು. ಬಿಜೆಪಿಯ ಶಿವಲಿಂಗಪ್ಪ ಪಾಟೀಲ್ ನರಿಬೋಳರವರು 42,504 (40.90%) ಮತಗಳನ್ನು ಪಡೆದು ಮೂರನೇ ಬಾರಿ ಧರ್ಮಸಿಂಗ್‌ರ ವಿರುದ್ಧ ಪರಾಭವಗೊಂಡರು. 2,731

(2.63%) ಮತಗಳ ಅಂತರದಿಂದ ಎಂಟನೇ ಬಾರಿ ವಿಧಾನಸಭಾ ಸದಸ್ಯರಾಗಿ ಧರ್ಮಸಿಂಗ್‌ರವರು ಚುನಾಯಿತರಾದರು. ಕರ್ನಾಟಕದ 17ನೇ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿದ ಧರ್ಮಸಿಂಗ್‌ರವರು 20 ತಿಂಗಳ ಕಾಲ ಸಮ್ಮಿಶ್ರ ಸರ್ಕಾರ ವನ್ನು ಕಾರ್ಯನಿರ್ವಹಿಸಿದರು.


**ಒಂಬತ್ತನೇ ಬಾರಿ ವಿಧಾನಸಭಾ ಚುನಾವಣಾ ಸ್ಪರ್ಧೆ–2008**

**ಕೋಷ್ಟಕ–9: 2008ರ ಜೇವರ್ಗಿ ಮತಕ್ಷೇತ್ರದ ವಿಧಾನಸಭಾ ಚುನಾವಣಾ ಫಲಿತಾಂಶ**

| ಕ್ರ.ಸಂ. | ಅಭ್ಯರ್ಥಿಗಳ ಹೆಸರು | ಪಕ್ಷ | ಸಾಮಾನ್ಯ ಮತ | ಅಂಚೆ ಮತ | ಒಟ್ಟು | ಶೇಕಡಾ |
|---|---|---|---|---|---|---|
| 1 | ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ ನರಿಬೋಳ | BJP | 46456 | 75 | 46531 | 40.28 |
| 2 | ಎನ್.ಧರ್ಮಸಿಂಗ್ | INC | 46404 | 57 | 46461 | 40.22 |
| 3 | ಕೇದಾರಲಿಂಗಯ್ಯ ಹಿರೇಮಠ | IND | 7845 | 11 | 7856 | 6.80 |
| 4 | ಅಪ್ಪಾಜಿ ಬಸಣ್ಣ | BSP | 2264 | 2 | 2266 | 1.96 |
| 5 | ಬಸವರಾಜ ಎಚ್. ಬೂದಿಹಾಳ | JD(S) | 2205 | 0 | 2205 | 1.91 |
| 6 | ಶಿವಾನಂದ | IND | 1883 | 0 | 1883 | 1.63 |
| 7 | ಮಹಾಂತಯ್ಯ | IND | 1690 | 0 | 1690 | 1.46 |
| 8 | ಎಸ್.ಎಮ್.ಸುಭಾನ ಹುಸೇನ್ | IND | 1327 | 0 | 1327 | 1.15 |
| 9 | ಬಾಬಾಸಾಹೇಬ ಭೀಮರಾವ ಸೇರಿ | IND | 941 | 0 | 941 | 0.81 |
| 10 | ಮಹಮ್ಮದ ಅಲಿ | IND | 754 | 0 | 754 | 0.65 |
| 11 | ಅಲಿಸಾಬ ಬಗರಿಕುರ ಮಳ್ಳಿ | LJP | 740 | 0 | 740 | 0.64 |
| 12 | ಭೀಮಯ್ಯ ಸೋಮಯ್ಯ | IND | 655 | 0 | 655 | 0.57 |
| 13 | ಕಲ್ಲಾಲಿಂಗ ಆಯ್. ಹೂಗಾರ | IND | 608 | 0 | 608 | 0.53 |
| 14 | ಎ.ಸೈಯದ ಪಟೇಲ್ ಯಾಳವಾರ | IND | 360 | 0 | 360 | 0.31 |
| 15 | ಎಂ.ಡಿ.ಅಮೀರ ಚರಮ್ | IND | 348 | 0 | 348 | 0.30 |
| 16 | ಖಾಜಾ ಹುಸೇನ ಗುಡೂರ | SP | 334 | 0 | 334 | 0.29 |
| 17 | ಉಸ್ಮಾನ ಪಟೇಲ್ ಸಿಗರಥಹಳ್ಳಿ | IND | 291 | 0 | 291 | 0.25 |
| 18 | ಸಿದ್ದಣ್ಣಗೌಡ ಶಂಕರಗೌಡ ಪಾಟೀಲ್ (ಕುರಳಗೇರಾ) | JD(U) | 259 | 0 | 259 | 0.22 |

ಆಕರ: **http://eci.gov.in**

**ರೇಖಾಚಿತ್ರ–9: 2008ರ ವಿಧಾನಸಭಾ ಚುನಾವಣೆಯ ಜೇವರ್ಗಿ ಮತಕ್ಷೇತ್ರದ ಅಭ್ಯರ್ಥಿವಾರು ಮತಗಳಿಕೆ ಮತ್ತು ಶೇಕಡಾ ಮತದಾನ**





| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 |
|---|---|---|---|---|---|---|---|---|---|---|---|---|---|---|---|---|---|---|
| Series2 | 40.2 | 40.2 | 6.80 | 1.96 | 1.91 | 1.63 | 1.46 | 1.15 | 0.81 | 0.65 | 0.64 | 0.57 | 0.53 | 0.31 | 0.30 | 0.29 | 0.25 | 0.22 |
| Series1 | 4653 | 4646 | 7856 | 2266 | 2205 | 1883 | 1690 | 1327 | 941 | 754 | 740 | 655 | 608 | 360 | 348 | 334 | 291 | 259 |

2008ರ 13ನೇ ವಿಧಾನಸಭಾ ಚುನಾವಣೆ ಒಟ್ಟು 214 ಸ್ಥಾನಗಳಲ್ಲಿ ಬಿಜೆಪಿ ಪಕ್ಷವು 110 ಸ್ಥಾನಗಳನ್ನು ಗೆದ್ದುಕೊಂಡು ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್ ಪಕ್ಷವು 80 ಸ್ಥಾನಗಳನ್ನು ಮತ್ತು ಜನತಾದಳ(ಎಸ್) 28 ಸ್ಥಾನಗಳನ್ನು ಗೆದ್ದುಕೊಂಡವು. ಜೇವರ್ಗಿ ವಿಧಾನಸಭಾ ಕ್ಷೇತ್ರದಿಂದ 18 ಜನ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿದ್ದರು. ಧರ್ಮಸಿಂಗ್ ಅವರಿಗೆ 46,461 (40.22%) ಮತಗಳನ್ನು ಪಡೆದರೆ, ಬಿಜೆಪಿಯ ಪ್ರತಿಸ್ಪರ್ಧಿಯಾದ ದೊಡ್ಡಪ್ಪಗೌಡ ಶಿವಲಿಂಗಪ್ಪಗೌಡ ಪಾಟೀಲ ನರಿಬೋಳರವರು 46,531 (40.28%) ಮತಗಳನ್ನು ಪಡೆದು, ಧರ್ಮಸಿಂಗ್‌ರವರನ್ನು ಕೇವಲ 70 (0.06%) ಮತಗಳ ಅಂತರದಿಂದ ಸೋಲಿಸಿದರು.

**ಕೋಷ್ಟಕ–10: 1972–2008ರ ವರೆಗಿನ ವಿಧಾನಸಭಾ ಚುನಾವಣೆಯಲ್ಲಿ ಚಲಾವಣೆಗೊಂಡ ಮತದಾನದ ಪ್ರಮಾಣ ಮತ್ತು ಎನ್.ಧರ್ಮಸಿಂಗ್‌ರವರ ಮತಗಳ ಪಾಲು**

| ವರ್ಷ | ಮತದಾನದ ಪ್ರಮಾಣ | ಧರ್ಮಸಿಂಗ್‌ರವರ ಮತಗಳ ಪಾಲು |
|---|---|---|
| 1972 | 50.96 | 57.99 |
| 1978 | 63.32 | 54.13 |
| 1983 | 58.59 | 54.34 |
| 1985 | 59.80 | 48.15 |
| 1989 | 56.25 | 47.13 |
| 1994 | 56.51 | 40.91 |
| 1999 | 58.11 | 43.17 |
| 2004 | 58.07 | 43.52 |
| 2008 | 60.79 | 40.28 |

**ರೇಖಾಚಿತ್ರ–10: ವಿಧಾನಸಭಾ ಚುನಾವಣೆಯಲ್ಲಿ ಚಲಾವಣೆಗೊಂಡ ಮತದಾನದ ಪ್ರಮಾಣ ಮತ್ತು ಎನ್.ಧರ್ಮಸಿಂಗ್‌ರವರ ಮತಗಳ ಪಾಲು**




**ಕೋಷ್ಟಕ–11: ವಿಶ್ಲೇಷಣಾತ್ಮಕ ಅಂಕಿ–ಅಂಶಗಳು ಮತ್ತು ಪರಸ್ಪರತೆಯ ವಿಶ್ಲೇಷಣೆಗಳು**

| **ಭಾಗ–ಅ 1972–2008ರ ವರೆಗಿನ ಚುನಾವಣಾ ಅಂಕಿ–ಅಂಶಗಳ ಅವಲೋಕನ** | | |
|---|---|---|
| **ಸಾರಾಂಶ ಅಂಕಿ–ಅಂಶಗಳು** | **ಮತದಾನದ ಪ್ರಮಾಣ** | **ಧರ್ಮಸಿಂಗ್‌ರವರ ಮತಗಳ ಪಾಲು** |
| ಸರಾಸರಿ | 58.04 | 47.62 |
| ಮಧ್ಯಂಕ | 58.11 | 47.13 |
| ಗರಿಷ್ಠ | 63.32 | 57.99 |
| ಕನಿಷ್ಠ | 50.96 | 40.28 |
| ಪ್ರಮಾಣಿತ ವಿಚಲನ (S.D) | 3.44 | 6.53 |
| ವ್ಯತ್ಯಾಸದ ಗುಣಾಂಕ(C.V) | 0.59 | 1.37 |

| **ಭಾಗ–ಬ ಮತದಾನದ ಪ್ರಮಾಣ ಮತ್ತು ಧರ್ಮಸಿಂಗ್‌ರವರ ಮತಗಳ ಪಾಲಿನ ಪರಸ್ಪರತೆಯ ವಿಶ್ಲೇಷಣೆ** | |
|---|---|
| ಟಿ-ಪರೀಕ್ಷೆ (T-Test) | 0.002386222 |
| ಪಿ–ಮೌಲ್ಯ (p-Value) | 0.000313021 |
| ಪರಸ್ಪರ ಸಂಬಂಧ ಗುಣಾಂಕ | –0.245512166 |

ಕೋಷ್ಟಕ–11 (ಅ) ಭಾಗವು ಧರ್ಮಸಿಂಗ್‌ರವರು ಸ್ಪರ್ಧಿಸಿದ ಮತಕ್ಷೇತ್ರದಲ್ಲಿ 1972–2008ರ ಅವಧಿಯಲ್ಲಿ ಸರಾಸರಿ ಒಟ್ಟು ಮತದಾನದ ಪ್ರಮಾಣ 58.04ರಲ್ಲಿ ಧರ್ಮಸಿಂಗ್‌ರವರ ಮತಗಳ ಹಂಚಿಕೆ ಪ್ರಮಾಣ 47.62ರಷ್ಟಿದ್ದು, ಮಧ್ಯಂಕವು ಒಟ್ಟು ಮತದಾನದ ಪ್ರಮಾಣ 58.11ರಲ್ಲಿ ಧರ್ಮಸಿಂಗ್‌ರವರ ಮತಗಳ ಹಂಚಿಕೆ ಪ್ರಮಾಣ 47.13ರಷ್ಟಿದೆ. ಹಾಗೆಯೇ ಗರಿಷ್ಠ ಮತದಾನದ ಪ್ರಮಾಣ 67.32ರಲ್ಲಿ ಧರ್ಮಸಿಂಗ್‌ರವರು ಪಡೆದಿದ್ದು

57.99ರಷ್ಟು, ಕನಿಷ್ಠ ಮತದಾನದ ಪ್ರಮಾಣ 50.96ರಲ್ಲಿ ಧರ್ಮಸಿಂಗ್‌ರವರ ಕನಿಷ್ಠ ಮತಗಳ ಪಾಲು 40.28ರಷ್ಟಿದೆ. ಪ್ರತಿ ಚುನಾವಣೆಯಲ್ಲಿ ಧರ್ಮಸಿಂಗ್‌ರವರು ಪಡೆದ ಮತ ಹಂಚಿಕೆಯು ಮತದಾನದ ಪ್ರಮಾಣಕ್ಕಿಂತ ಕಡಿಮೆ ಎಂಬುದನ್ನು ಇದು ಸೂಚಿಸುತ್ತದೆ. ಒಟ್ಟು ಮನದಾತದ ಪ್ರಮಾಣಿತ ವಿಚಲನ(ಎಸ್.ಡಿ) 3.44ರಲ್ಲಿ ಧರ್ಮಸಿಂಗ್‌ರವರ ಮತ ಹಂಚಿಕೆ ಪ್ರಮಾಣಿತ ವಿಚಲನ(ಎಸ್.ಡಿ) 6.53ರಷ್ಟಾಗಿದೆ. ಅಂದರೆ ಚಲಾವಣೆಯಾದ ಒಟ್ಟು ಮತಗಳಿಗಿಂತ ಧರ್ಮಸಿಂಗ್‌ರವರು ಪಡೆದ ಮತಗಳಿಗೆ ಹೆಚ್ಚು ವಿಚಲನವಿದೆ (Deviation) ಎಂದು ಅದು ಸೂಚಿಸುತ್ತದೆ. ಹಾಗೆಯೇ ಭಿನ್ನಾಭಿಪ್ರಾಯ/ವ್ಯತ್ಯಾಸದ ಗುಣಾಂಕ(ಸಿ.ವಿ) ಸಹ ಪ್ರಮಾಣಿತ ವಿಚಲನದ ಫಲಿತಾಂಶಗಳನ್ನು ಬೆಂಬಲಿಸುತ್ತದೆ. ಇದು 1972 ರಿಂದ 2008ರ ವರೆಗಿನ ಒಂಬತ್ತು ವಿಧಾನಸಭಾ ಚುನಾವಣೆಯಲ್ಲಿ ಒಟ್ಟು ಮತದಾನದ ಪ್ರಮಾಣಗಳಿಗಿಂತ ಧರ್ಮಸಿಂಗ್‌ರವರು ಪಡೆದ ಮತಗಳ ಪಾಲು ಹೆಚ್ಚು ಸ್ಥಿರವಾಗಿದೆ ಎಂದು ತಿಳಿಸುತ್ತದೆ.

ಕೋಷ್ಟಕ–11 ಭಾಗ(ಬ)ವು ವಿಧಾನಸಭಾ ಚುನಾವಣೆಯಲ್ಲಿ ಒಟ್ಟು ಮತದಾನದ ಪ್ರಮಾಣ ಮತ್ತು ಧರ್ಮಸಿಂಗ್‌ರವರ ಮತಗಳ ಹಂಚಿಕೆಯ ನಡುವಿನ ಪರಸ್ಪರ ಗುಣಾಂಕವು –0.245 ಎಂದು ಋಣಾತ್ಮಕ ಸಂಘಟನೆ ಹೊಂದಿದೆ ಎಂದು ತೋರಿಸುತ್ತದೆ. ಸಂಖ್ಯಾಶಾಸ್ತ್ರೀಯವಾಗಿ 5% ಗಮನಾರ್ಹವಾದ ಪ್ರಾಮುಖ್ಯತೆಯ ಮಟ್ಟ, ಇದು ಶೂನ್ಯ ಪ್ರಾಕ್‌ಕಲ್ಪನೆಯನ್ನು ತಿರಸ್ಕರಿಸಲು ಈ ಫಲಿತಾಂಶ ಸಹಾಯಕಾರಿವಾಗಿದೆ. ಧರ್ಮಸಿಂಗ್‌ರವರ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು ಮತದಾನದ ಪ್ರಮಾಣ ಮತ್ತು ಮತಗಳ ಹಂಚಿಕೆಯ ನಡುವೆ ಯಾವುದೇ ಋಣಾತ್ಮಕ ಸಂಬಂಧವಿಲ್ಲ. ಆದ್ದರಿಂದ ಚುನಾವಣೆಯಲ್ಲಿ ಧರ್ಮಸಿಂಗ್‌ರವರಿಗೆ ಒಟ್ಟು ಮತಗಳ ಹಂಚಿಕೆ ಮತ್ತು ಮತದಾನ ಪ್ರಮಾಣದ ನಡುವೆ ಬಲವಾದ ನಕಾರಾತ್ಮಕ ಅಂಶಗಳಿವೆ. ಇದರಂತೆ ಸಂಖ್ಯಾಶಾಸ್ತ್ರದ ಫಲಿತಾಂಶಗಳು ತಿಳಿಸುವಂತೆ ಧರ್ಮಸಿಂಗ್‌ರವರು ತಮ್ಮದೇಯಾದ ಸಾಂಪ್ರದಾಯಿಕ ಮತ್ತು ಮತಬ್ಯಾಂಕ್‌ಗಳನ್ನು ಹೊಂದಿದಾರಲ್ಲದೇ ಹೆಚ್ಚಿನ ಮತಗಳನ್ನು ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

**ಉಪಸಂಹಾರ**

ರಾಜಕೀಯದಲ್ಲಿ ನಾಯಕತ್ವ ಎನ್ನುವುದು ನಿರಂತರವಾದ ಪ್ರಕ್ರಿಯೆವಾಗಿದೆ. ಮತದಾರರು, ಪಕ್ಷದ ಕಾರ್ಯಕರ್ತರು ಮತ್ತು ಪಕ್ಷದ ವರಿಷ್ಠರಲ್ಲಿ ಗುರುತಿಸಿಕೊಳ್ಳಲು ನಾಯಕತ್ವದ ಗುಣಗಳನ್ನು ಹೊಂದಿರಬೇಕಾಗುತ್ತದೆ. “I must follow the people simply because I am their real leader” ಎಂದು ಗ್ರೀಕ್ ತತ್ವಜ್ಞಾನಿಯಾದ ಅರಿಸ್ಟಾಟಲ್‌ರವರು ಹೇಳಿದ ವ್ಯಾಖ್ಯಾನದಂತೆ, ಧರ್ಮಸಿಂಗ್‌ರವರು ಜನತೆಯನ್ನು ಅನುಸರಿಸಿ ನಾಯಕರಾದವರು. ತಮ್ಮ ದೀರ್ಘ ರಾಜಕೀಯ ಬದುಕಿನಲ್ಲಿ ಅವರ ಅಪಾರ ಅನುಭವವನ್ನು ಅಂತರ್ಗತ ಮಾಡಿಕೊಂಡಿರುವ ಪ್ರಬುದ್ಧ ರಾಜಕಾರಣಿಯೆಂದೆನಿಸಿಕೊಂಡಿದ್ದಾರೆ. ಆದರೂ ಕೂಡಾ ಪಕ್ಷನಿಷ್ಠೆ, ಸೈದ್ಧಾಂತಿಕ ನೆಲೆಗಟ್ಟನ್ನು ಹೊಂದಿದ ಧರ್ಮಸಿಂಗ್‌ರವರಿಗೆ ಪ್ರಬಲ ಜಾತಿಯ ಬಲವಿಲ್ಲದಿಂದರೂ ಸಹ ತಮ್ಮ ಮತಬ್ಯಾಂಕ್‌ನ್ನು ಹೊಂದಿದ್ದರು ಎನ್ನುವುದಕ್ಕೆ ಅವರ ಚುನಾವಣಾ ಫಲಿತಾಂಶದ ಅಂಕಿ–ಅಂಶಗಳೇ ಸಾಕ್ಷಿಯಾಗಿವೆ.

**ಪರಾಮರ್ಶನ ಗ್ರಂಥಗಳು**


- ಭಾರತ ಚುನಾವಣಾ ಆಯೋಗದ ವೆಬ್‌ಸೈಟ್– http://eci.gov.in
- ಗುರುಪ್ರಸಾದ್ ಡಿ.ವಿ. (2022). *ಧರ್ಮಾತ್ಮ – ನಾ ಕಂಡಂತೆ ಧರ್ಮಸಿಂಗ್.* ವಿಕ್ರಂ ಪ್ರಕಾಶನ.
- ಹನುಮಂತರಾವ್ ಕೆ. ಎಲ್., ಶ್ರೀಮತ್ಸ (ಸಂ.) (2005). *ದಣಿಯದ ಧರ್ಮಸಿಂಗ್ – ಅಲ್ಪ ಸಮಯ, ಅಧಿಕ ಸಾಧನೆ.* ಮಾರ್ಗದರ್ಶಿ ಪ್ರಕಾಶಕರು.

- ಹನುಮಂತರಾವ್ ಕೆ.ಎಲ್., ಶ್ರೀವತ್ಸ ಮತ್ತು ಇತರರು (ಸಂ.). (2006). *ಧರ್ಮಚೇತನ ಧರ್ಮಸಿಂಗ್, ದೂರ ದೃಷ್ಟಿ – ದಕ್ಷ ಆಡಳಿತ.* ಮಾರ್ಗದರ್ಶಿ.
- ಜಮಾದಾರ್ ಸಿರಾಜುದ್ದೀನ್ ತಿರಂದಾಜ. (2005). *ವರ್ಣರಂಜಿತ ವ್ಯಕ್ತಿ: ಮುಖ್ಯಮಂತ್ರಿ ಧರ್ಮಸಿಂಗ್*, ಎಚ್.ಆರ್. ಹವಾಲದಾರ, ಆಂದೋಲ, ಜೇವರ್ಗಿ.
- ನಾಗರಾವತ್ ಮಲ್ಲಣ್ಣ ಶಿವರಾಯಗೌಡ. (2004). *ಧರ್ಮದ ಹುಲಿ.*
- ಪಾಟೀಲ್ ಶಿವರಾಜ. (2004). *ಧರ್ಮ ಸಿಂಧು.* ಮಹಾಂತೇಶ ಪ್ರಕಾಶನ.
- ಪಾಟೀಲ್ ಶರಣ ಪ್ರಕಾಶ್ (ಪ್ರ.ಸಂ.). ಸಿ.ಬಿ.ಪಾಟೀಲ್ ಓಕಳಿ (ಸಂ.) (2016). *ಜಾತ್ಯತೀತ ಧುರೀಣ ಧರ್ಮಸಿಂಗ್ 80 (ಅಭಿನಂದನಾ ಗ್ರಂಥ)*, ಎನ್. ಧರ್ಮಸಿಂಗ್‌ರವರ ಅಭಿನಂದನಾ ಸಮಿತಿ,